

ಗಮನವನ್ನು ಹೇಗೆ ಬೇರೆ ಕಡೆ ತಿರುಗಿಸಬಹುದು ಎಂಬ ಎಲ್ಲ ಚಾಣಾಕ್ಷ ಬುದ್ಧಿಯು ಅದಕ್ಕೆ ಗೊತ್ತು. ಅದಕ್ಕಾಗಿ ಹುಲಿ ತುಂಬಾ ಹೊತ್ತು ಕಾಯುತ್ತದೆ. ಅದಕ್ಕೆ ಎಷ್ಟೇ ಧೈರ್ಯವಿದ್ದರೂ ಅದು ಎಂದಿಗೂ ಅವಸರ ಮಾಡುವುದಿಲ್ಲ. ಎಷ್ಟೋ ಹುಲಿಗಳು ಕಾಡೆಮ್ಮೆಗೆ ಎದುರಾಗಿ ಹೋಗಿ ಕಾಡೆಮ್ಮೆಗಳ ಚಾಕುವಿನಂತಹ ಚೂಪಾದ ಕೊಂಬುಗಳಿಗೆ ತಮ್ಮ ದೇಹವನ್ನು ಕೊಟ್ಟು ಬಲಿಯಾಗಿರುವ, ಗಾಯಗೊಂಡಿರುವ ಉದಾಹರಣೆಗಳು ಇದ್ದಾವೆ. ಹುಲಿಗೆ ಕಾಡೆಮ್ಮೆ ಎಂದರೆ ಎಷ್ಟು ಇಷ್ಟವೋ ಅಷ್ಟೇ ಕಷ್ಟ ಕೂಡ ಹೌದು. ಅದನ್ನು ಎದುರಿಸುವಾಗ ಅದು ಹೆಚ್ಚು ಜಾಗರೂಕವಾಗಿರುತ್ತದೆ. ಹೀಗಾಗಿ ಹುಲಿಯ ಬೇಟೆ ನಡೆಯಬಹುದು ಎಂದು ಕಾದಿದ್ದೇ ಕಾದಿದ್ದು. ಹುಲಿ ಪ್ರಾಯಶಃ ಕತ್ತಲಾಗುವುದನ್ನು ಕಾಯುತ್ತಿತ್ತು ಎಂದು ಕಾಣುತ್ತದೆ. ನಮಗೆ ಅಲ್ಲಿ ಹೆಚ್ಚು ಹೊತ್ತು ಇರಲು ಆಗಲೇ ಇಲ್ಲ.

ನಾವು ನಿರೀಕ್ಷಿಸಿದಂತೆ ಹುಲಿ ಬಂದು ಕಾಡೆಮ್ಮೆಗಳ ಮೇಲೆ ಆಕ್ರಮಣ ಮಾಡಲಿ, ಅದನ್ನು ನಾವು ನಮ್ಮ ಕ್ಯಾಮರಾಗಳಲ್ಲಿ ಸೆರೆ ಹಿಡಿದು, ಖುಷಿಯಾಗಿ ಮನೆಗೆ ಬಂದು ತೋರಿಸಿ ಹಿಗ್ಗಿ ಹೀರೇಕಾಯಿ ಆಗುತ್ತೇವೆ ಎಂದೆಲ್ಲಾ ಅಂದುಕೊಂಡಿರುತ್ತೇವೆ. ಇಂತಹ ಘಟನೆಗಳು ನಡೆಯುವುದು ರಾತ್ರಿ ಕತ್ತಲಲ್ಲಿ ಅಥವಾ ಹುಲಿಗೆ ಯಾವಾಗ ತನ್ನ ಕೆಲಸ ಮಾಡಿಕೊಳ್ಳಲು ಸಾಧ್ಯವೊ ಆಗ. ನಾವಂದುಕೊಂಡಂತೆ ಏನೂ ಆಗುವುದಿಲ್ಲ. ಹುಲಿ ಕೂಡ ತನ್ನ ಭೇಟೆಯಲ್ಲಿ ತುಂಬಾ ಸಲ ಸೋಲುತ್ತದೆ, ಕಾಯುತ್ತದೆ. ಅದು ಎಷ್ಟೇ ಧೈರ್ಯಶಾಲಿಯಾಗಿದ್ದರೂ ಅವಸರ ಮಾಡುವುದಿಲ್ಲ. ಲೆಕ್ಕಾಚಾರದಲ್ಲಿ ತಪ್ಪುವುದಿಲ್ಲ. ಸೂಕ್ಷ್ಮವಾಗಿ ಗಮನಿಸುವುದು, ಹೊಂಚು ಹಾಕಿ ಬೆನ್ನ ಹಿಂದಿನಿಂದ ಬಂದು ಆಕ್ರಮಣ ಮಾಡುವುದು ಹುಲಿಯ ಸ್ವಭಾವ ಮತ್ತು ಗುಣ. ●